# ಗರಿ ತೋರುವ ದಾರಿ

ಭಕ್ತಿಯೆದುರು ಭಗವಂತ ಶಿಶುವಾಗುವ ಸನ್ನಿವೇಶ ಮಹಾಮಸ್ತಕಾಭಿಷೇಕ. ಮಹಾಮಜ್ಜನದ ವೇಳೆ, ಶ್ರವಣಬೆಳಗೊಳದ ಗೊಮ್ಮಟ ಅಮ್ಮಂದಿರ ನಡುವಿನ ಎಳೆಗೂಸು. ಕಂದಮ್ಮನನ್ನು ಎಷ್ಟು ಮೀಯಿಸಿದರೂ ಭಕ್ತರೆಂಬ ಅಮ್ಮಂದಿರಿಗೆ ತೃಪ್ತಿಯಿಲ್ಲ. ನೆತ್ತಿಯ ಮೇಲಿನಿಂದ ಅಡಿಗಳಿಯುವ ಅರಿಶಿನ, ಚಂದನ, ಎಳನೀರು, ಜೇನು, ಉದಕ, ಕಷಾಯ ಸೇರಿದಂತೆ ಬಗೆ ಬಗೆ ದ್ರವ್ಯಗಳ ಧಾರೆ. ಪ್ರತಿ ಧಾರೆಗೂ ಬಣ್ಣ ಬದಲಿಸುವ ಗೊಮ್ಮಟಮೂರ್ತಿಯನ್ನು ನೋಡುವುದು ಕಣ್ಣುಗಳಿಗೆ ಹಬ್ಬ. ಆದರೆ, ಈ ವರ್ಣರಂಜಿತ ಹಾಗೂ ಪರಿಮಳಭರಿತ ಮಜ್ಜನದ ಪ್ರದರ್ಶನದಿಂದ, ಬಾಹುಬಲಿಯ ಪಾದಗಳ ಬಳಿ ಕುಳಿತ ಜಿನಮುನಿಗಳ ಕಣ್ಣುಗಳ ಹೊಳಪೇನೂ ಹೆಚ್ಚುವುದಿಲ್ಲ. ಧಾರೆಯಾಗಿ ಹರಿಯುವ ಅಭಿಷೇಕದ ನೀರಿನಲೆಗಳಿಗೆ ಸಿಕ್ಕ ಕ್ರಿಮಿ ಕೀಟಗಳತ್ತ ಅವರ ಗಮನ. ನೀರಿನ ಹರಿವಿನಿಂದ ಕ್ರಿಮಿಕೀಟಗಳನ್ನು ಎತ್ತಿ, ಅವುಗಳನ್ನು ಸುರಕ್ಷಿತ ಸ್ಥಳಗಳಿಗೆ ದಾಟಿಸುವುದರತ್ತ ಅವರ ಧ್ಯಾನ. ಯತಿಗಳ ಜೀವಕಾರುಣ್ಯ ಕಂಡು ಗೊಮ್ಮಟನ ಕಣ್ಣುಗಳೂ ತುಂಬಿಕೊಳ್ಳುತ್ತವೇನೊ? ಸಂತೆಯಲ್ಲೂ ಸಂತನಾಗಿರಬೇಕು ಎನ್ನುವ ಮಾತು ಮೂರ್ತಗೊಳ್ಳುವ ಕ್ಷಣಗಳವು.

ವಿರಾಗ ಅಥವಾ ಅಧ್ಯಾತ್ಮದ ಪಥ ಐಹಿಕ ಸುಖಭೋಗಗಳಿಗೂ ವ್ಯಕ್ತಿಗೂ ಅಂತರ ಕಲ್ಪಿಸಬಹುದೇ ಹೊರತು, ಜೀವಕಾರುಣ್ಯದಿಂದಲ್ಲ. ಅಧ್ಯಾತ್ಮದ ಸಾಧನೆಯಲ್ಲಿ ನಡೆದಷ್ಟೂ ಜೀವಕಾರುಣ್ಯವೂ ಹೆಚ್ಚುತ್ತಾ ಹೋಗುತ್ತದೆ. ಜೀವಕಾರುಣ್ಯ ವಿಹೀನವಾದ ಅಧ್ಯಾತ್ಮದಲ್ಲಿ ವೈಯಕ್ತಿಕ ಹಿತವೂ ಇಲ್ಲ, ಸಮಷ್ಟಿಯ ಹಿತವೂ ಇಲ್ಲ. ನಿಕೃಷ್ಟವೆಂದು ಕಾಣುವ ವಸ್ತು–ಸಂಗತಿಗಳಲ್ಲಿ ಇರಬಹುದಾದ ಮಹತಿಯನ್ನು, ಜೀವದ ಇರುವನ್ನು ಅಧ್ಯಾತ್ಮ ನಮಗೆ ಕಾಣಿಸುತ್ತದೆ; ಗೊಮ್ಮಟನಂಥ ವಿರಾಟ್ ಸಾನ್ನಿಧ್ಯದ ಸನ್ನಿಧಿಯಲ್ಲೂ ಪುಟ್ಟ ಕೀಟದ ಜೀವದ ಇರುವನ್ನು ಮರೆಯಬಾರದ ಪ್ರಜ್ಞೆಯನ್ನು ಕರುಣಿಸುತ್ತದೆ. ಸಾಹಿತ್ಯ ಮಾಡುವುದೂ ಇದೇ ಕೆಲಸವನ್ನು. ನಿದರ್ಶನದ ರೂಪದಲ್ಲಿ ದ.ರಾ. ಬೇಂದ್ರೆಯವರ 'ಗರಿ' ಕವಿತೆಯನ್ನು ಗಮನಿಸಬಹುದು.

ಕಾಗೆ ಕೋಗಿಲೆ ಗಿಳಿ ಗೊರವಂಕ ಗುಬ್ಬಿ ನವಿಲು ಸೇರಿದಂತೆ ವಿವಿಧ ಹಕ್ಕಿಗಳ ಬಗ್ಗೆ ಕವಿತೆ ಬರೆದು, ಪಕ್ಷಿಲೋಕದ ಹಿರಿಮೆಯನ್ನು ಕಾಣಿಸಿ ಸಹೃದಯರನ್ನು ಬೆರಗುಗೊಳಿಸಿದವರಿದ್ದಾರೆ. ಕುವೆಂಪು ಅವರಂತೂ ಕಾಜಾಣವನ್ನು ಕಾವ್ಯರಸಿಕರ ಎದೆಗಳಲ್ಲಿ ಜೀವಗೊಳಿಸಿದವರು. ಆದರೆ, ಹಕ್ಕಿಯ ಪುಕ್ಕದಲ್ಲಿ ಕಾವ್ಯವನ್ನು ಕಂಡವರು ಬೇಂದ್ರೆಯವರೊಬ್ಬರೇ ಇರಬೇಕು. ಹಾದಿಯಲ್ಲಿ ಹಕ್ಕಿಪುಕ್ಕವೊಂದು ಅನಾಥವಾಗಿ, ಕಸವಾಗಿ ಬಿದ್ದಿದೆ. ಅದನ್ನು ಕೈಯಲ್ಲಿ ಹಿಡಿದು ಹಕ್ಕಿಯ ಚಿತ್ರ ಕಟ್ಟಿಕೊಡುವುದು, ಅದರ ಬದುಕಿನ ಸಾರ್ಥಕತೆಯ ಸಾಧ್ಯತೆಗಳತ್ತ ಓದುಗರ ಗಮನಸೆಳೆಯುವುದು ವರಕವಿಗೆ, ಗಾರುಡಿಗ ಕವಿಗಷ್ಟೇ ಸಾಧ್ಯ.

ಹಕ್ಕಿಯ ಪುಕ್ಕವೊಂದನ್ನು ನಾವು ಏನು ಮಾಡಬಹುದು? ಬಣ್ಣಗಳು ಆಕರ್ಷಕವಾಗಿದ್ದರೆ, ಗರಿಯನ್ನು ಪುಸ್ತಕದ ಪುಟಗಳ ನಡುವೆ ಜತನವಾಗಿರಿಸಬಹುದು. ಅಲಂಕಾರಕ್ಕಾಗಿ ಬಳಸಬಹುದು. ಆದರೆ, ಕವಿಯ ಮೂಲಕ 'ಗರಿ' ತೋರುವ ದಾರಿಯೇ ಬೇರೆ. ಬೇಂದ್ರೆ ಹೇಳುತ್ತಾರೆ:

ಊದಿ ತೂರಿ ಹಾರಿಸು/ ಹಾರಿದಷ್ಟು ಹಾರಲಿ/ ಹಾರಲೆಂದು ಹುಟ್ಟಿದಾ/ ಹಕ್ಕಿ ಮೈಯ ಗರಿಗಳು.

ಎಂಥ ಅದ್ಭುತ ದರ್ಶನ. ಹಕ್ಕಿಯ ಬದುಕಿನ ಸಾರ್ಥಕತೆಯಿರುವುದು ಹಾರುವುದರಲ್ಲಿ. ಆದರೆ, ಈಗ ನಮ್ಮೆದುರುಗಿರುವುದು ಹಕ್ಕಿಯಲ್ಲ; ಅದರ ಪುಕ್ಕವಷ್ಟೇ. ಆ ಪುಕ್ಕವನ್ನೇ ಅಂಗೈಯಲ್ಲಿರಿಸಿಕೊಂಡು, ಬಾಯಿಯಿಂದ ಊದಿ ಊದಿ ಹಾರಿಸು ಎನ್ನುತ್ತಾರೆ ಕವಿ. ಅದು ಎಷ್ಟು ಎತ್ತರ, ಎಷ್ಟು ದೂರ ಹಾರುತ್ತದೆ? ಆ ಚಿಂತೆ ನಿನಗೆ ಬೇಡ, 'ಹಾರಿದಷ್ಟು ಹಾರಲಿ' ಎನ್ನುತ್ತಾರೆ. ಯಾಕೆ ಈ ಹಾರಾಟದ ಕಸರತ್ತು? ಯಾಕೆಂದರೆ, 'ಹಾರಲೆಂದೆ ಹುಟ್ಟಿದಾ ಹಕ್ಕಿ ಮೈಯ ಬದುಕದು.' ಹೀಗೆ, ಪುಕ್ಕವೊಂದರ ಮೂಲಕ, ಹಕ್ಕಿಯನ್ನು, ಅದರ ಬದುಕನ್ನು, ಆ ಬದುಕಿನ ಘನತೆಯನ್ನೂ ಕವಿತೆ ಕಟ್ಟಿಕೊಡುತ್ತದೆ. ಅಧ್ಯಾತ್ಮ ಮಾಡುವುದೂ ಇದನ್ನೇ ಅಲ್ಲವೇ? ಬದುಕಿನ ಸಣ್ಣ ಸಣ್ಣ ಸಂಗತಿಗಳಲ್ಲಿ ಇರಬಹುದಾದ ಮಹತ್ವವನ್ನು ಕಾಣಿಸುವ ಅಧ್ಯಾತ್ಮ ಆ ಮಹತಿಯ ಇರುವನ್ನು ಅರಿಯುವ ಹಾಗೂ ಗುರ್ತಿಸುವ ಅರಿವನ್ನು ನೀಡುತ್ತದೆ. ಪರಿಣಾಮದ ದೃಷ್ಟಿಯಿಂದ ನೋಡಿದರೆ, ಅಧ್ಯಾತ್ಮ ಹಾಗೂ ಕಾವ್ಯ ಅಭಿನ್ನ. ಎರಡರ ಉದ್ದೇಶವೂ ವ್ಯಕ್ತಿಯೊಳಗಿನ ಮಾನವೀಯತೆಯನ್ನು ಉಜ್ವಲಗೊಳಿಸುವುದೇ ಆಗಿದೆ.

ಬೇಂದ್ರೆಯವರ 'ಸಖೀಗೀತ'ದ ಬಗ್ಗೆ ಬರೆಯುವಾಗ, ಅಧ್ಯಾತ್ಮಕ್ಕಿಂತಲೂ ಕಾವ್ಯದ ತೂಕ ಹೆಚ್ಚಿನದು ಎನ್ನುವ ಅರ್ಥದ ಮಾತನ್ನಾಡುತ್ತಾರೆ ವಿಮರ್ಶಕ ರಾಜೇಂದ್ರ ಚೆನ್ನಿ. 'ಕಾವ್ಯವು ಈ ಲೋಕದ ವಾಸ್ತವ ಪ್ರಪಂಚದ ಭಾಗವೇ ಆಗಿರುವುದರಿಂದ ಕೇವಲ ಅಂತಿಮ ಚರಮಸ್ಥಿತಿಯ ಬಗೆಗಿನ ಕಾವ್ಯ ನಮಗೆ ರುಚಿಸುವುದಿಲ್ಲ. ಅದು ಧರ್ಮ, ಅಧ್ಯಾತ್ಮವಾಗಿರುತ್ತದೆ. ಕಾವ್ಯವಾಗಿರುವುದಿಲ್ಲ. ನನ್ನ ವೈಯಕ್ತಿಕ ದೃಷ್ಟಿಯಲ್ಲಿ ಅಧ್ಯಾತ್ಮವು ಕಾವ್ಯಕ್ಕಿಂತ ಕೆಳದರ್ಜೆಯ ಸ್ಥಿತಿಯಾಗಿದೆ. ಹೀಗಾಗಿ ಕಾವ್ಯವನ್ನು ಅಧ್ಯಾತ್ಮವಾಗಿ ಬಳಸಿಕೊಳ್ಳುವುದು ಅಕ್ರಮವೆಂದೇ ನಾನು ಭಾವಿಸುತ್ತೇನೆ' ಎನ್ನುವ ಚೆನ್ನಿಯವರ ಮಾತನ್ನು ಜಗ್ಗುತ್ತಾ – ಕಾವ್ಯ ದೊಡ್ಡದೋ, ಅಧ್ಯಾತ್ಮ ದೊಡ್ಡದೋ ಎಂದು ವಾದಿಸುವುದರಲ್ಲಿ ಅರ್ಥವಿಲ್ಲ. ಒಂದನ್ನು ಕಿರಿದಾಗಿಸಿ, ಮತ್ತೊಂದನ್ನು ಹಿರಿದಾಗಿಸುವುದರಿಂದ ಸಾಹಿತ್ಯದ ಉದ್ದೇಶ ಸಫಲಗೊಳ್ಳುವುದಿಲ್ಲ, ಅಧ್ಯಾತ್ಮದ ಪರಿಣಾಮವೂ ಯಶಸ್ವಿಯಾಗುವುದಿಲ್ಲ. ಈ ಜಗತ್ತಿನ ಕಣಕಣದಲ್ಲೂ ಬದುಕಿನ ಘನತೆಯ ಹೊಳಪು ಹೆಚ್ಚಿಸುವ ಮಾಂತ್ರಿಕ ಶಕ್ತಿಯಿದೆ ಎನ್ನುವ ತಿಳಿವಿನ ಕಣ್ಣನ್ನು ದೊರಕಿಸಿಕೊಡುವುದರಲ್ಲಿ ಅಧ್ಯಾತ್ಮ ಮತ್ತು ಕಾವ್ಯದ ಶಕ್ತಿಯಿದೆ.

■ **ಚಂಪಕಮಾಲಾ**

## ಮಾತೇ ಮುತ್ತು

- ಸಂತೋಷ ಲಭ್ಯವಿದೆ. ದಯಮಾಡಿ ಸ್ವಸಹಾಯ ಪದ್ಧತಿಯ ಮೂಲಕ ಪಡೆದುಕೊಳ್ಳಿ.

  –ನಾಟ್‌ಹಾನ್

- ಸಾವಿನ ಭಯವು ಜೀವನದ ಭಯದಿಂದ ಅನುಸರಿಸುತ್ತದೆ. ಸಂಪೂರ್ಣವಾಗಿ ಬದುಕುವ ಮನುಷ್ಯ ಯಾವುದೇ ಸಮಯದಲ್ಲಿ ಸಾಯಲು ಸಿದ್ಧನಾಗಿರುತ್ತಾನೆ.

  –ಮಾರ್ಕ್ ಟ್ವೇನ್

- ಬದಲಾವಣೆಯೇ ಬಾಳಿನೊಗ್ಗರಣೆ.

  –ಕೆ.ಎಸ್. ನರಸಿಂಹಸ್ವಾಮಿ

- ತಾಂತ್ರಿಕ ಶಿಕ್ಷಣ ಬದುಕಿಗಾಗಿ, ಆಧ್ಯಾತ್ಮಿಕ ಶಿಕ್ಷಣ ಬಾಳಿಗಾಗಿ.

  –ದ.ರಾ. ಬೇಂದ್ರೆ

- ಒಪ್ಪಿಕೊಂಡ ಕೆಲಸ ಹೇಗೆ ಮಾಡಬೇಕೆಂದರೆ ಹರಕೆ ಹೊತ್ತವರ ಹಾಗೆ ತದೇಕಚಿತ್ತ ಹಾಗೂ ಶ್ರದ್ಧೆಯಿಂದ ಮಾಡಬೇಕು.

  –ಟಿ.ವಿ. ವೆಂಕಟಾಚಲಶಾಸ್ತ್ರಿ

- ಭಾಷೆ ವೈಯಕ್ತಿಕವೂ ಹೌದು, ಸಾಮಾಜಿಕವೂ ಹೌದು ಏಕಕಾಲಕ್ಕೆ.

  –ಗೋಪಾಲಕೃಷ್ಣ ಅಡಿಗ

- ಬರುವುದೇನುಂಟೊಮ್ಮೆ ಬರುವ ಕಾಲಕೆ ಬಹುದು. ಬಯಕೆ ಬರುವುದರ ಕಣ್ಣನ್ನೆ ಕಾಣ್ಪೋ.

  –ಮಧುರ ಚೆನ್ನ

- ದುಃಖದಲ್ಲಿ ಬೆಂದ ಮನುಷ್ಯನಿಗೆ ಗೆಳೆಯ ಔಷಧಿಯಾಗಬಹುದು.

  –ಸಾ.ಶಿ. ಮರುಳಯ್ಯ

- ನಂಬಿಕೆ ಇರಬೇಕು, ನಂಬಿಕೆಗೆ ಕಣ್ಣಿರಬೇಕು, ನಂಬಿಕೆಯ ಕಣ್ಣು ತೆರೆದಿರಬೇಕು; ಆಗ ನಂಬಿಕೆಯ ನಂಬಬಹುದು.

  –ಎಸ್.ವಿ. ರಂಗಣ್ಣ